ದಿನಾಂಕ 10-07-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರಃ ಶ್ರೀ ಎಸ್ ಕೆ ವಕೀಲರಿಂದ :

ಈ ಪ್ರಕರಣದ ಪಿರ್ಯಾದಿ ನನ್ನ ಹೆಂಡತಿ. ಚಾಸಾ-3 ನನ್ನ ಹೆಂಡತಿ ಚಾಸಾ-1 ರವರ ಅತ್ತಿಗೆ. ಚಾಸಾ-4 ರವರು ನನ್ನ ನೆರೆಮನೆಯವರು ಹಾಗೂ ಸಂಬಂಧಿಕರು. ಚಾಸಾ-5 ರಿಂದ 8 ನೆರೆಮನೆಯವರು. ಚಾಸಾ-9 ನನ್ನ ಅತ್ತಿಗೆ ಮಗ. ಸದರಿ ವ್ಯಕ್ತಿಗಳೆಲ್ಲರೂ ನಮ್ಮೊಂದಿಗೆ ಅನ್ಯೋನ್ಯವಾಗಿದ್ದಾರೆ. ಪೊಲೀಸರಿಗೆ ಸದರಿ ವ್ಯಕ್ತಿಗಳನ್ನು ನಾವು ಪರಿಚಯ ಮಾಡಿಕೊಟ್ಟಿರುತ್ತೇವೆ. ನಾನು ಘಟನೆಯಾದ ದಿನ ಬೆಳಿಗ್ಗೆ 10.00 ಗಂಟೆಗೆ ಕೆಲಸಕ್ಕೆ ಹೋಗಿರುತ್ತೇನೆ. ರಾತ್ರಿ 10.20 ಕ್ಕೆ ನನ್ನ ಹೆಂಡತಿ ಕರೆ ಮಾಡಿ ವಿಚಾರ ತಿಳಿಸಿರುತ್ತಾರೆ. ನನಗೆ ರಾತ್ರಿ 12.00 ಗಂಟೆ ವರೆಗೆ ಕೆಲಸವಿರುತ್ತದೆ. ನನ್ನ ಹೆಂಡತಿ ನನಗೆ ಕರೆ ಮಾಡಿ ನಮ್ಮ ಮನೆಯ ಬೀಗ ಒಡೆದಿದೆ ಯಾರೊ ಕಳ್ಳತನ ಮಾಡಿಬಹುದು ಎಂದು ತಿಳಿಸಿರುತ್ತಾರೆ. ಆಗ ನಾನು ನೀನು ಒಳಗೆ ಹೋಗುವುದು ಬೇಡ ನಾನು ಪೊಲೀಸರನ್ನು ಕರಕೊಂಡು ಬರುತ್ತೇನೆ ಎಂದು ಹೇಳಿ ಕೂಡಲೇ ಪೊಲೀಸ್ ಠಾಣೆಗೆ ಹೋಗಿ ಹೆಂಡತಿ ತಿಳಿಸಿದ ವಿವರಗಳನ್ನು ಪೊಲೀಸರಿಗೆ ತಿಳಿಸಿರುತ್ತೇನೆ. ನಾನು ಹೇಳಿದ ಕೂಡಲೇ 5-6 ಜನ ಪೊಲೀಸರು ಬಂದಿರುತ್ತಾರೆ. ಎಸ್ ಐ ಆ ನಂತರ ಬಂದಿರುತ್ತಾರೆ. ಎಸ್ ಐ ರವರು ಅರ್ಧ ಗಂಟೆ ಬಿಟ್ಟು ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಎಸ್ ಐ ಬಂದ ನಂತರವೇ ನಾವು ಮನೆಯ ಒಳಗೆ ಹೋಗಿರುತ್ತೇವೆ. ಮುಂದೆ ಪೊಲೀಸರು ನಂತರ ಹೆಂಡತಿ ನಂತರ ನಾನು ಒಳಗೆ ಹೋಗಿರುತ್ತೇವೆ.

ನಮ್ಮ ಮನೆಯಲ್ಲಿ 5 ಕೋಣೆಗಳಿವೆ. ಮನೆಯ ಮುಖ ಉತ್ತರ ದಿಕ್ಕಿಗೆ ಇದೆ. ನಾವು ಮನೆಯ ಮುಖ್ಯ ಬಾಗಿಲಿಗೆ ಒಳಗಿನಿಂದ ಚೀಲಕ ಹಾಕಿ ಅಡುಗೆ ಕೋಣೆಯ ಬಾಗಿಲಿಗೆ ಹೊರಗಿನಿಂದ ಬೀಗವನ್ನು ಹಾಕಿರುತ್ತೇವೆ. ನಮ್ಮ ಮನೆಯಲ್ಲಿ 2 ಕಾಪಾಟುಗಳು ಇವೆ. ಸದರಿ ಕಾಪಾಟಿನಲ್ಲಿ ಲಾಕರ್ ಇದೆ. ಯಾವುದೇ ಮೌಲ್ಯಯುತ ಸೊತ್ತುಗಳನ್ನು ಹೆಚ್ಚಿನ ಭದ್ರತೆಯಲ್ಲಿ ಬೀಗ ಹಾಕಿ ಇಡಬೇಕು ಎನ್ನುವುದು ಸರಿ. ನಾವು

ಸಹ ಚಿನ್ನವನ್ನು ಕಾಪಾಟಿನಲ್ಲಿ ಬೀಗ ಹಾಕಿ ಇಡುವುದು. ನಮ್ಮ ಮನೆಯ ಹತ್ತಿರದಲ್ಲಿ 10 ಅಡಿ ದೂರದಲ್ಲಿ ನನ್ನ ಹೆಂಡತಿಯ ಅತ್ತಿಗೆ ಮನೆ ಇದೆ ಮತ್ತು ಉಳಿದ ಮನೆಗಳು 100 ಮೀಟರ್ ದೂರದಲ್ಲಿ ಇದೆ. ಏನಾದಾರು ಶಬ್ದಗಳು ಆದರೆ ಅಕ್ಕಪಕ್ಕದ ಮನೆಯವರಿಗೆ ತಿಳಿಯುತ್ತದೆ. ನಮ್ಮ ಮನೆಯಲ್ಲಿ 2 ನಾಯಿಗಳು ಇವೆ. ಬೀಗವನ್ನು ಯಾವುದರಿಂದ ಒಡೆದಿದ್ದಾರೆ ಎಂದು ಹೇಳಲಾಗುವುದಿಲ್ಲ, ಆದರೆ ಬೀಗವನ್ನು ಒಡೆದಿರುತ್ತಾರೆ. ಪೊಲೀಸರು ಘಟನಾ ಸ್ಥಳದಲ್ಲಿ ಅರ್ಧ ಗಂಟೆಯಿಂದ ಒಂದು ಗಂಟೆಯವರೆಗೆ ಇದ್ದು ಎಲ್ಲರ ಬಳಿ ಹೇಳಿಕೆಯನ್ನು ಕೇಳುತ್ತಿದ್ದರು. ಅದೇ ರೀತಿ ನನ್ನ ಹೇಳಿಕೆಯನ್ನು ಕೇಳಿರುತ್ತಾರೆ. ನಾವು ವಿವರಗಳನ್ನು ಹೇಳಿರುತ್ತೇವೆ. ಸದರಿ ಹೇಳಿಕೆಗೆ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಆ ದಿನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಮರುದಿನ ನಮ್ಮ ಹೇಳಿಕೆಯನ್ನು ಪುನಃ ಬರೆದು ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ.

ಮೆಹಂದಿಗೆ ಹೋಗುವ ವಿಚಾರವನ್ನು ರಾತ್ರಿ 8.00 ಗಂಟೆಗೆ ಕರೆ ಮಾಡಿ 2 ನೇ ಅರೋಪಿ, ಚಾಸಾ-3, 5 ರವರೊಂದಿಗೆ ಹೋಗುತ್ತೇನೆ ಎಂದು ನನ್ನ ಒಪ್ಪಿ ಗೆ ಕೇಳಿರುತ್ತಾರೆ. ಒಪ್ಪಿ ಗೆ ನೀಡಿರುತ್ತೇನೆ. ಮೆಹಂದಿ ಕಾರ್ಯಕ್ರಮ ನಮ್ಮ ಮನೆಯಿಂದ ಸುಮಾರು ಒಂದರಿಂದ ಒಂದುವರೆ ಕಿ ಮೀ ದೂರದಲ್ಲಿ ಇತ್ತು.

ನಾನು ಮರುದಿನ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. 2 ನೇ ಆರೋಪಿಯ ಗಂಡ ನನ್ನ ತಂದೆಯ ಅಣ್ಣನ ಮಗ, ದೂರದ ಸಂಬಂಧ. ನಿಮ್ಮ ಮನೆಯ ದೈವದ ಗುಳಿಗ ಎಂದರೆ ಸಾಕ್ಷಿಯು ನಮ್ಮ ಮನೆ ದೇವರು ಬೇರೆ ನಮ್ಮಜಾಗದಲ್ಲಿ ಗುಳಿಗ ಸೇರಿ 10 ದೈವಗಳು ಇವೆ. 3 ವರ್ಷಗಳ ಮುಂಚೆ ಸದರಿ ದೈವದ ಕಾರ್ಯವನ್ನು 2 ನೇ ಆರೋಪಿಯ ಗಂಡ ಮಾಡುತ್ತಿದ್ದರು. ನಿಮ್ಮ ಮತ್ತು 2 ನೇ ಆರೋಪಿಯ ಗಂಡನ ಮತ್ತು ನಮ್ಮ ನಡುವೆ ವೈ ಮನಸ್ಸು ಮೂಡಿ 2 ನೇ ಆರೋಪಿಯ ಗಂಡನು ದೈವದ ಕೆಲಸವನ್ನು ಮಾಡುವುದನ್ನು ನಿಲ್ಲಿಸಿದರು ಎಂದರೆ ಸರಿ. ಆ ನಂತರ ನಾನು ಮತ್ತು ನನ್ನ ಹೆಂಡತಿ 2 ನೇ ಆರೋಪಿಯ ಕುಟುಂಬದ ದ್ವೇಷ ಸಾಧಿಸಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ನಮ್ಮ ಮನೆಯ ಮುಂದೆ ಹೋಗುವಾಗ ಅವರಿಗೆ ನಾಯಿಯನ್ನು ಚೂ ಬಿಟ್ಟು, ಅವರು ಅಂಗನವಾಡಿಯಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದ ಕೆಲಸವನ್ನು ತೆಗೆದುಹಾಕಿಸಿದ್ದು ಹಾಗೂ

ಸ್ವಸಹಾಯ ಗುಂಪಿನಲ್ಲಿ ಸಾಲಕ್ಕೆ ಅರ್ಜಿ ಹಾಕಿದಾಗ ಸಾಲವು ಸಿಗದಂತೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. 2 ನೇ ಆರೋಪಿಯು ನಮ್ಮ ವಿರುದ್ಧ ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ '' ನನ್ನನ್ನು ಬದುಕಲು ಬಿಡುತ್ತಿಲ್ಲ '' ಎಂದು ದೂರನ್ನು ನೀಡಿದ್ದು ಪೊಲೀಸರು ನನ್ನನ್ನು ಮತ್ತು ಚಾಸಾ-1 ರವರನ್ನು ಕರೆದು ಎಚ್ಚರಿಕೆ ನೀಡಿ ಮುಚ್ಚಳಿಕೆ ಪತ್ರ ಬರೆಸಿಕೊಂಡಿರುತ್ತಾರೆ ಎಂದರೆ ಸರಿ.

ಚಾಸಾ-6 ರಿಂದ 9 ರವರಿಗೆ ನಾನು ಕೆಲಸ ಮಾಡುವ ಸ್ವಾಗತ್ ಬಾರ್ ಎಂಡ್ ರೆಸ್ಟೋರೆಂಟ್ ನಿಂದ ಮಧ್ಯಪಾನ ತಂದು ನೀಡುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ವ್ಯಕ್ತಿಗಳು ಯಾರು ಸಾರಾಯಿ ಮಧ್ಯಪಾನ ಮಾಡುವುದಿಲ್ಲ. ಸದ್ರಿ ವ್ಯಕ್ತಿಗಳು ಮಧ್ಯಪಾನ ಮಾಡುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಠಾಣೆಗೆ 2 ಸಲ ಹೋಗಿರುತ್ತೇನೆ. ಪೊಲೀಸರು ಬರೆದುಕೊಂಡ ಹೇಳಿಕೆಯನ್ನು ನನಗೆ ಓದಿ ಹೇಳಿರುವುದಿಲ್ಲ. ಪೊಲೀಸರು ಮರುದಿನ ಮನೆಗೆ ಬಂದಿರುವ ದಿನ ನಾನು ಕೆಲಸಕ್ಕೆ ಹೋಗಿರುವುದಿಲ್ಲ. ಮರುದಿನ ಮನೆಗೆ ಬೆಳಿಗ್ಗೆ 10.00 ಚಾಸಾ-22, 21, ಹಾಗೂ ಶ್ವಾನ ದಳ, ಹಾಗೂ 10 ಜನ ಪೊಲೀಸರು ಬಂದಿದ್ದರು. ಸದರಿ ದಿನ ಮಾಡಿದ ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಮ್ಮ ಮನೆಯಲ್ಲಿ ಕಳ್ಳತನ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯ ಗಂಡನ ಮೇಲಿನ ದ್ವೇಷದಿಂದ 2 ನೇ ಅರೋಪಿ ಹಾಗೂ ಆಕೆಯ ಸಂಬಂಧಿಕ 1 ನೇ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ಹೇಳುವ ದಿನ 2 ನೇ ಆರೋಪಿಯು ಆಕೆಯ ತಾಯಿ ಕ್ಯಾನ್ಸರ್ ಚಿಕಿತ್ಸೆಗಾಗಿ ಮಂಗಳೂರಿನ ಫಾದರ್ ಮುಲ್ಲ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದು ಅಲ್ಲಿ ಇದ್ದರು ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮನೆಗೆ ಬಂದಿರುವುದಿಲ್ಲ, ಯಾವುದೇ ಪರಿಶೀಲನೆ ಮಾಡಿರುವುದಿಲ್ಲ, ಮಹಜರು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಸೇರಿ ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ